2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 148/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗೌರಮ್ಮ | ಪಿಡಬ್ಲೂ -1 |
| ಗಂಡನ ಹೆಸರು | - | ಕುಮಾರಪ್ಪ | ಸಿಡಬ್ಲೂ -1 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಅರಬಲಗೊಲ್ಲರಹಟ್ಟಿ | |

ದಿನಾಂಕಃ 09.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. 1 ನೇ ಆರೋಪಿ ನನ್ನ ಗಂಡನಿಗೆ ಸಂಬಂಧದಲ್ಲಿ ಅಣ್ಣನಾಗಬೇಕು. 3 ನೇ ಆರೋಪಿ 1 ನೇ ಆರೋಪಿಯ ಹೆಂಡತಿ ಮತ್ತು 2 ನೇ ಆರೋಪಿ 1 ಮತ್ತು 3 ನೇ ಆರೋಪಿತರ ಮಗ. ಚಾಸಾ.2 ನನ್ನ ಗಂಡ. ಚಾಸಾ.3 ರಿಂದ ಚಾಸಾ.7 ರವರು ಗೊತ್ತು, ಅವರು ನಮ್ಮ ಊರಿನವರು.

2. ಅರಬಲಗೊಲ್ಲರಹಟ್ಟಿ ಯಲ್ಲಿ ನಮ್ಮ ಸ್ವಂತ ಮನೆ ಇದೆ. ನಮ್ಮ ಮನೆಯ ಪಕ್ಕದಲ್ಲಿ ಆರೋಪಿತರ ಮನೆ ಇದೆ. ಆರೋಪಿತರು ಕೂಲಿ ಕೆಲಸ ಮಾಡಿಕೊಂಡಿದ್ದಾರೆ. ನಮ್ಮ ಮನೆಯ ಪಕ್ಕದಲ್ಲಿ ಸ್ವಲ್ಪ ಜಾಗವಿದೆ. ಅಲ್ಲಿ ಆರೋಪಿತರು ಕುರಿ ಕಸ ಮತ್ತು ಸಗಣಿಯನ್ನು ಹಾಕುತ್ತಿದ್ದರು. ನಮ್ಮ ಮನೆಯ ಗೋಡೆ ಮಣ್ಣಿನ ಗೋಡೆಯಾಗಿದ್ದರಿಂದ ಕಸ ಮತ್ತು ಸಗಣಿಯನ್ನು ಹಾಕುತ್ತಿದ್ದರಿಂದ ಅದು ಹಾಳಾಗುತ್ತಿತ್ತು. ಹಾಗಾಗಿ ನಾನು ಆರೋಪಿತರಿಗೆ ಅಲ್ಲಿ ಕಸ ಮತ್ತು ಸಗಣಿಯನ್ನು ಹಾಕಬೇಡಿ

ಎಂದು ಹೇಳುತ್ತಿದ್ದೆನು. ಈಗ್ಗೆ 3 ವರ್ಷ 2 ತಿಂಗಳ ಹಿಂದೆ ಒಂದು ದಿನ ನಾನು ಮತ್ತು ನನ್ನ ಗಂಡ ನಮ್ಮ ಮನೆಯಲ್ಲಿದ್ದೆವು. ಆಗ ಮಧ್ಯಾಹ್ನ 2.00 ರಿಂದ 3.00 ಗಂಟೆಯ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಟ್ರಾಕ್ಟರ್ ಕುರಿಕಸ ಮತ್ತು ದನದ ಸಗಣಿಯನ್ನು ಹೇರುತ್ತಿದ್ದರು ಮತ್ತು ನೆಲಗಡಲೆಯ ಕಸವನ್ನು ನಮ್ಮ ಮನೆಯ ಕಡೆಗೆ ತಳ್ಳುತ್ತಿದ್ದರು. ಆಗ ನಾನು ಮತ್ತು ನನ್ನ ಗಂಡ ಅಲ್ಲಿಗೆ ಹೋಗಿ ಆ ರೀತಿ ಕಸವನ್ನು ನಮ್ಮ ಮನೆಯ ಕಡೆಗೆ ತಳ್ಳಬೇಡಿ ಎಂದು ಹೇಳಿದೆವು. ಆಗ 2 ನೇ ಆರೋಪಿ ಲೋಪರ್ ಮುಂಡೆ, ಬೇವರ್ಸಿ ಮುಂಡೆ, ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿ ದೊಣ್ಣೆಯಿಂದ ನನ್ನ ತಲೆಯ ಬುರುಡೆಗೆ ಹೊಡೆದನು. ಆಗ ನನ್ನ ತಲೆಯ ಬುರುಡೆ ಹೊಡೆದುಕೊಂಡು ರಕ್ತ ಬಂದು ನನ್ನ ಬಟ್ಟೆಗಳಿಗೆಲ್ಲಾ ರಕ್ತವಾಯಿತು. ನನ್ನ ಗಂಡ ನನ್ನನ್ನು ಬಿಡಿಸಲು ಬಂದಾಗ 3 ನೇ ಆರೋಪಿ ಗೀತಮ್ಮ ಬಿದಿರು ಕೋಲಿನಿಂದ ನನ್ನ ಗಂಡನ ಬೆನ್ನಿಗೆ ಹೊಡೆದಳು. ಅಷ್ಟರಲ್ಲಿ ಅಲ್ಲಿಗೆ ಚಂದ್ರಪ್ಪ, ಕಾಂತರಾಜು, ಸಣ್ಣಜ್ಜ, ಕಂಬಣ್ಣ ರವರು ಬಂದು ಗಲಾಟೆ ಬಿಡಿಸಿದರು. ನಂತರ ನನ್ನ ಸಂಬಂಧಿ ಶ್ರೀಧರ ಅಲ್ಲಿಗೆ ಬಂದು ನನ್ನನ್ನು ಮತ್ತು ನನ್ನ ಗಂಡನನ್ನು ಬೈಕಿನಲ್ಲಿ ಅಜ್ಜಂಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲಿಸಿದನು.

3. ನಾವು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಅಜ್ಜಂಪುರ ಪೊಲೀಸರು ಅಲ್ಲಿಗೆ ಬಂದು ನಮ್ಮನ್ನು ವಿಚಾರಿಸಿದರು, ಆಗ ನಾನು ಅವರಿಗೆ ಆರೋಪಿತರ ವಿರುದ್ಧ ದೂರನ್ನು ಕೊಟ್ಟೆನು. ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಎಡಗೈನ

ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು ಗುರುತಿಸಲಾಯಿತು.

4. ಆ ದಿನ ನಾವು ಸದರಿ ಆಸ್ಪತ್ರೆಯಲ್ಲಿಯೇ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆವು. ಮಾರನೇ ದಿನ ಪೊಲೀಸರು ನನ್ನನ್ನು ಮತ್ತು ನನ್ನ ಗಂಡನನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋದರು. ನಾನು ನಮ್ಮ ಮನೆಯ ಮುಂಭಾಗದಲ್ಲಿದ್ದ ಮಣ್ಣಿನ ರಸ್ತೆಯಲ್ಲಿ ಪೊಲೀಸರಿಗೆ ಸ್ಥಳವನ್ನು ತೋರಿಸಿ ಆರೋಪಿತರು ನನ್ನ ಮತ್ತು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ ಸ್ಥಳ ಅದೇ ಎಂದು ತೋರಿಸಿದೆನು. ಅಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡು ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡರು. ಆ ಸಮಯದಲ್ಲಿ ಮಂಜುನಾಥ್ ಮತ್ತು ಇನ್ನೊಬ್ಬರು ಹಾಜರಿದ್ದು ಸಹಿ ಮಾಡಿದ್ದಾರೆ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಸ್ಥಳದಲ್ಲಿ ಮಣ್ಣಿನ ಮೇಲೆ ಬಿದ್ದಿದ್ದ ನನ್ನ ರಕ್ತವನ್ನು ಮಣ್ಣಿನ ಸಮೇತ ಕವರ್ ಗೆ ಹಾಕಿ ತೆಗೆದುಕೊಂಡರು ಮತ್ತು ಸ್ಥಳದಲ್ಲಿದ್ದ ಬೇರೆ ಮಣ್ಣನ್ನು ಸಹ ಕವರ್ ಗೆ ಹಾಕಿ ತೆಗೆದುಕೊಂಡರು.

5. ಘಟನಾ ಸಮಯದಲ್ಲಿ ನಾನು ಬಿದ್ದಿದ್ದ ಸ್ಥಳದಲ್ಲಿ ಇದ್ದ ಒಂದು ದೊಣ್ಣೆ ಮತ್ತು ಒಂದು ಬಿದಿರಿನ ಕೋಲನ್ನು ನಾನು ಪೊಲೀಸರಿಗೆ ಕೊಟ್ಟು 2 ಮತ್ತು 3 ನೇ ಆರೋಪಿತರು ನನ್ನ ಮತ್ತು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ ದೊಣ್ಣೆ ಮತ್ತು ಕೋಲು ಅವೇ ಎಂದು ತಿಳಿಸಿದೆನು. ಅವುಗಳನ್ನು ಪೊಲೀಸರು ತೆಗೆದುಕೊಂಡರು. ಘಟನಾ ಸಮಯದಲ್ಲಿ ನಾನು ಬಿಳಿಯ ಬಣ್ಣದ ಹೂವುಗಳಿರುವ ಹಸಿರು ಬಣ್ಣದ ಸೀರೆಯನ್ನು ಮತ್ತು ಒಳಲಂಗವನ್ನು ಧರಿಸಿದ್ದೆನು. ಅವುಗಳಿಗೆ ರಕ್ತದ ಕಲೆಗಳಾಗಿದ್ದವು.

ಅವುಗಳನ್ನೂ ಸಹ ಆ ಸಮಯದಲ್ಲಿ ಪೊಲೀಸರಿಗೆ ಕೊಟ್ಟೆನು. ಆ ದಿನ ಪೊಲೀಸರು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ ಆ ಬಗ್ಗೆ ಮಹಜರನ್ನು ಮಾಡಿಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.2 ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಪೊಲೀಸರು ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ಸ್ಥಳದಲ್ಲಿ ಮಹಜರ್ ಮಾಡಿಕೊಳ್ಳುವ ಸಮಯದಲ್ಲಿ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು.

7. ಪೊಲೀಸರು ಮಹಜರ್ ಮಾಡುವಾಗ ಮೇಲೆ ಹೇಳಿದಂತೆ ತೆಗೆದುಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳು ಇವೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ವಸ್ತುಗಳನ್ನು ಆರೋಪಿತರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು, ಒಂದು ಮರದ ದೊಣ್ಣೆ, ಒಂದು ಹಸಿರು ಬಣ್ಣದ ಸೀರೆ, ಒಂದು ಸೀಮೆಂಟ್ ಬಣ್ಣದ ಒಳ ಲಂಗವನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ ಮು.ಮಾ.5 ಎಂದು

ಗುರುತಿಸಲಾಯಿತು. ಸಾಕ್ಷಿಯು ಒಂದು ಬಿದಿರಿನ ಕೋಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.6 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.